'ನೀನು ಯೋಚಿಸುವುದೂ ಸರಿ ಗುರು. ನಾನು, ನೀನು ವಿಶಿಷ್ಟ ಅನ್ನಬಹುದಾದಂತಹ ವೃತ್ತಿಯಲ್ಲಿರುವುದು ನಿಜ. ಆದ್ದರಿಂದ, ನಿನ್ನ ಬಳಿಯಾಗಲೀ ಆ ಪೊಲೀಸನ ಬಳಿಯಾಗಲೀ ಮಾತನಾಡುವಾಗ ನಾನು ತುಂಬಾ ಜಾಗ್ರತನಾಗಿರಬೇಕಾಗುತ್ತದೆ.'

'ನೀನು ಮುಷ್ಟಿಯಲ್ಲಿರುವ ಪತ್ತೇದಾರನಲ್ಲ ತಾನೆ?'

'ನಾನು ಹಾಗೆ ಕಾಣಿಸುತ್ತಿದ್ದೇನೆಯೇ?'

'ಹಾಗೆ ಕಾಣಿಸುತ್ತಿಲ್ಲವೆಂದು ಯಾರು ಬೇಕಾದರೂ ಹೇಳಬಹುದು.'

ಅವನು ಜಾಕೆಟಿನೊಳಗಿಂದ ತಂಬಾಕು ಪುಡಿ ಮತ್ತು ಸಿಗರೇಟ್ ಪೇಪರುಗಳನ್ನು ಹೊರತೆಗೆದು ಒಂದು ಸಿಗರೇಟನ್ನು ಸುತ್ತಿದ. ನಾನು ಕಡೆಗಣ್ಣಿಂದ ಅವನನ್ನೇ ಗಮನಿಸುತ್ತಿದ್ದೆ. ಸ್ವತಃ ಸಿಗರೇಟು ಸುತ್ತುವುದು ಸುಲಭದ ಕೆಲಸವಲ್ಲದಿದ್ದರೂ ಅವನು ಅದನ್ನು ಐದೇ ಸೆಕೆಂಡುಗಳಲ್ಲಿ ಮುಗಿಸಿದ. ಸಿಗರೇಟ್ ಪೇಪರಿನ ಬುಡಕ್ಕೆ ಉಗುಳಿನಿಂದ ಅಂಟಿಸಿ ತುಟಿಗಳ ಮಧ್ಯೆ ಸಿಕ್ಕಿಸಿದ. ಮರುಕ್ಷಣದಲ್ಲೇ ಅವನ ಕೈಯಲ್ಲಿ ಅದೆಲ್ಲಿಂದಲೋ ಸಿಗರೇಟು ಲೈಟರೊಂದು ಕಾಣಿಸಿತು. ಸಿಗರೇಟು ಹತ್ತಿಕೊಂಡಂತೇ ಲೈಟರು ಬಂದ ಹಾಗೆಯೇ ಮಾಯವಾಯಿತು. ಇದೆಲ್ಲ ಎಷ್ಟು ವೇಗವಾಗಿ ಜರುಗಿತೆಂದರೆ ನಾನು ಚಕಿತನಾದೆ.

'ಇಷ್ಟು ವೇಗದಲ್ಲಿ ಬೇರೆ ಯಾರೂ ಕೈಯಲ್ಲಿ ಸಿಗರೇಟು ಸುತ್ತಿದ್ದು ನಾನು ನೋಡಿರಲಿಲ್ಲ.' ನಾನು ಹೇಳಿದೆ.

ಅವನು ತೃಪ್ತಿಯ ನಗೆ ನಕ್ಕು ಆಳವಾಗಿ ದಂ ಎಳೆದ. 'ಹಾಗಾದ್ರೆ ನೀನು ಗಮನಿಸಿದೆ!'

'ಹೌದು. ಫೆಂಟ್ಯಾಸ್ಟಿಕ್!'

'ನಾನು ಅದನ್ನು ಹೇಗೆ ಮಾಡುತ್ತೇನೆಂದು ನೋಡುವ ಆಸೆಯಿದೆಯೇ?'

'ಖಂಡಿತವಾಗಿಯೂ.'

'ಇದು ಬೇರೇನಿಲ್ಲ. ಕೈಚಳಕವಷ್ಟೇ! ಅದರಲ್ಲೂ ನನ್ನ ಬೆರಳುಗಳು. ನನ್ನ ಬೆರಳುಗಳೇ ನನ್ನ ಸರ್ವಸ್ವ. ಜಗತ್ತಿನ ಶ್ರೇಷ್ಠ ಪಿಯಾನೋ ನುಡಿಸುವವನ ಬೆರಳುಗಳಿಗಿಂತಲೂ ಅಮೂಲ್ಯವಾದವುಗಳು.'

ನನ್ನ ದೃಷ್ಟಿ ಅವನ ಕೈಬೆರಳುಗಳ ಮೇಲೆ ಹರಿಯಿತು. ನಿಜವಾಗಿಯೂ ಅವನ ಬೆರಳುಗಳು ನಾಜೂಕಾಗಿ ಉದ್ದವಾಗಿದ್ದವು. ಅವು ಖಂಡಿತವಾಗಿಯೂ ಅವನ ಶರೀರದೊಂದಿಗೆ ಹೊಂದಿಕೊಳ್ಳುತ್ತಿರಲಿಲ್ಲ. ಅವು ಒಬ್ಬ ನರ ಶಸ್ತ್ರಚಿಕಿತ್ಸಕನದೋ ಅಥವಾ ಹೆಂಗಸರ ಕೈಗಡಿಯಾರ ರಿಪೇರಿ ಮಾಡುವವನದೋ ಬೆರಳುಗಳಂತೆ ಕಾಣಿಸುತ್ತಿದ್ದವು!

'ನನ್ನ ಕಾಯಕ ಒಬ್ಬ ಪಿಯಾನೋ ವಾದಕನ ಕೆಲಸಗಿಂತಲೂ ಸಾವಿರಪಟ್ಟು ಸಂಕೀರ್ಣವಾದುದು. ಪಿಯಾನೋ ನುಡಿಸುವುದಕ್ಕೆ ಇಷ್ಟವಿದ್ದ ಯಾರೂ ಕಲಿಯಬಹುದು. ಈಗಂತೂ, ಪ್ರತಿಮನೆಯಲ್ಲೂ ಒಬ್ಬರಲ್ಲೊಬ್ಬರು ಪಿಯಾನೋ ನುಡಿಸುವುದು ಫ್ಯಾಶನ್ ಆಗಿದೆ. ಏನಂತಿಯ ಗುರು?'

'ಅದೂ ನಿಜವೆ.' ನಾನೆಂದೆ.

'ಆದರೆ ನನ್ನ ಕೆಲಸ ಮಾಡುವವನು ಹುಡುಕುತ್ತಾ ಹೋದರೆ ಕೋಟಿಗೊಬ್ಬರು ಸಿಗಬಹುದೇನೋ.'

'ಹಾಗಾದ್ರೆ ನಿನ್ನ ಕೆಲಸ ಖಂಡಿತವಾಗಿಯೂ ಅಪೂರ್ವವಷ್ಟೇ ಅಲ್ಲ ವಿಶಿಷ್ಟವೂ ಆಗಿರಬೇಕು.' ನಾನು ಈಗ ಗಂಟೆಗೆ ನಲವತ್ತು ಮೈಲಿ ವೇಗದಲ್ಲಿ ಕಾರು ನಡೆಸುತ್ತಿದ್ದೆ. ನಾವು ಲಂಡನ್‌ನ